# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

**ಮಾನಸಗಂಗೋತ್ರಿ, ಮೈಸೂರು – 570 006**

ದೂರವಾಣಿ :0821–2419318/386/429 e-mail : dswuommgm@gmail.com


ಸಂಖ್ಯೆ: ವಿಕ್ಷೇಪಾ.2/24/902/2019–20 ದಿನಾಂಕ: 10–10–2019

## ಸುತ್ತೋಲೆ

ವಿಷಯ: 2019–20 ನೇ ಸಾಲಿಗೆ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 'ಸಹಕಾರ' ಕುರಿತು ಕನ್ನಡ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸುವ ಬಗ್ಗೆ.

******

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ, ಬೆಂಗಳೂರು, ಇವರ ಸಹಯೋಗದಲ್ಲಿ 'ಸಹಕಾರ' ಕುರಿತು ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯನ್ನು **ದಿನಾಂಕ: 22–10–2019ರ ಬೆಳಗ್ಗೆ 10.30 ಗಂಟೆಗೆ ಇ.ಎಂ.ಆರ್.ಸಿ. ಸಭಾಂಗಣ, ಮಾನಸಗಂಗೋತ್ರಿ, ಮೈಸೂರು** ಇಲ್ಲಿ ಏರ್ಪಡಿಸಲಾಗಿದೆ.

ಈ ಸ್ಪರ್ಧೆಗೆ ಪ್ರತಿ ಕಾಲೇಜು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು. ಚರ್ಚಾ ಸ್ಪರ್ಧೆಯ ವಿಷಯದ ಪರವಾಗಿ ಒಬ್ಬರು, ವಿರೋಧವಾಗಿ ಮತ್ತೊಬ್ಬರು ಮಾತನಾಡಬೇಕು. ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮೂರು ನಗದು ಬಹುಮಾನಗಳನ್ನು ನೀಡಲಾಗುವುದು (ಪ್ರಥಮ, ದ್ವಿತೀಯ ಮತ್ತು ತೃತೀಯ). ವಿಷಯದ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿ ಪ್ರಥಮ ಸ್ಥಾನ ಪಡೆದ ತಲಾ ಇಬ್ಬರು ಸ್ನಾತಕ ಹಾಗೂ ಇಬ್ಬರು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳನ್ನು ಅಂತರ ವಿಶ್ವವಿದ್ಯಾನಿಲಯ ಮಟ್ಟದ ಚರ್ಚಾ ಸ್ಪರ್ಧೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರತಿನಿಧಿಗಳನ್ನಾಗಿ ಕಳುಹಿಸಿಕೊಡಲಾಗುವುದು.

ಸ್ಪರ್ಧೆಗೆ 05 ನಿಮಿಷಗಳ (4+1) ಕಾಲಾವಕಾಶವಿರುತ್ತದೆ. ಸ್ಪರ್ಧೆಯ ವಿಷಯವನ್ನು ಕನ್ನಡದಲ್ಲೇ ಮಾತನಾಡಬೇಕು. ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ವಯೋಮಿತಿಯು ದಿನಾಂಕ: 22–10–2019ಕ್ಕೆ 25 ವರ್ಷಗಳನ್ನು ಮೀರಿರಬಾರದು (ಈ ಬಗ್ಗೆ ಪ್ರಮಾಣ ಪತ್ರ ಅಗತ್ಯ). ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಮ್ಮ ಹೆಸರುಗಳನ್ನು ಕಾಲೇಜಿನ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗದ ಮುಖ್ಯಸ್ಥರ ಮುಖಾಂತರ **ದಿನಾಂಕ: 19–10–2019**ರ ಒಳಗಾಗಿ ಈ ನಿರ್ದೇಶನಾಲಯಕ್ಕೆ ತಲುಪುವಂತೆ ಕಳುಹಿಸಲು ಕೋರಿದೆ. ಪರ ಸ್ಥಳದಿಂದ ಬರುವಂತಹ ವಿದ್ಯಾರ್ಥಿಗಳು ತಮ್ಮ ಪ್ರಯಾಣದ ರೈಲು ಅಥವಾ ಬಸ್ ಸಂಚಾರದ ಟಿಕೇಟ್‌ಗಳನ್ನು ಹಾಜರುಪಡಿಸಿ ಪ್ರಯಾಣ ದರವನ್ನು ಪಡೆಯಬಹುದು.

>>>>>>>>2

## ಚರ್ಚಾ ಸ್ಪರ್ಧೆಯ ವಿಷಯ

**ಸ್ನಾತಕ ಪದವಿ (ಯು.ಜಿ.) ವಿದ್ಯಾರ್ಥಿಗಳಿಗೆ:**

**" ರೈತರ ಆತ್ಮಹತ್ಯೆ ತಪ್ಪಿಸಲು ಸಹಕಾರ ಸಂಘಗಳು ನೆರವಾಗಬಲ್ಲವು "**

**ಸ್ನಾತಕೋತ್ತರ ಪದವಿ (ಪಿ.ಜಿ.) ವಿದ್ಯಾರ್ಥಿಗಳಿಗೆ:**

**" ಸರ್ಕಾರದ ನೆರವು, ಹತೋಟಿ ಇಲ್ಲದೆ ಸಹಕಾರ ಚಳುವಳಿ ಯಶಸ್ವಿಯಾಗದು "**

ಮೇಲ್ಕಂಡ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಹೆಸರಿನ ಮುಂದೆ, ವಿಷಯದ ಪರ ಅಥವಾ ವಿರೋಧ ಎಂಬುದನ್ನು ನಮೂದಿಸಿ ಕಳುಹಿಸಬೇಕು. ತಮ್ಮ ಕಾಲೇಜಿನ ದೂರವಾಣಿ ಸಂಖ್ಯೆಯನ್ನೂ ಸಹ ನಮೂದಿಸಿರಬೇಕು.

(ಡಾ. ಸಿ. ರಾಮಸ್ವಾಮಿ)
ನಿರ್ದೇಶಕ

10/10

ಗೆ,

1) ಮೈಸೂರು ವಿಶ್ವವಿದ್ಯಾನಿಲಯದ ಅಂಗ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ಸ್ನಾತಕೋತ್ತರ ಕೇಂದ್ರಗಳ ನಿರ್ದೇಶಕರು ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಹಾಸನ.
2) ಪ್ರಾಂಶುಪಾಲರು, ಸಹಕಾರ ತರಬೇತಿ ಕೇಂದ್ರ, ಚಾಮರಾಜ ಜೋಡಿ ರಸ್ತೆ, ಮೈಸೂರು.
3) ಕಚೇರಿ ಕಡತಕ್ಕೆ.

*ವಿಶೇಷ ಸೂಚನೆ:* 1. ವಿದ್ಯಾರ್ಥಿಗಳು ತಮ್ಮ ಕಾಲೇಜಿನ/ವಿಭಾಗದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕು.
2. ವಿದ್ಯಾರ್ಥಿಗಳು ತಮ್ಮ ವಯಸ್ಸಿನ ಬಗ್ಗೆ ಪ್ರಾಂಶುಪಾಲರಿಂದ/ವಿಭಾಗದ ಅಧ್ಯಕ್ಷರಿಂದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ತರಬೇಕು.

ಸು)